# ಕರ್ನಾಟಕ ಲೋಕಾಯುಕ್ತ

ಸಂ.ಕಂಪ್ಲೇಂಟ್.ಉಪಲೋಕ್.ಜಿ.ಎಲ್.ಬಿ-2680/2016/ಡಿಆರ್‌ಇ-5

ಬಹುಮಹಡಿಗಳ ಕಟ್ಟಡ,
ಡಾ: ಅಂಬೇಡ್ಕರ್ ವೀಧಿ,
ಬೆಂಗಳೂರು-560 001,
ದಿನಾಂಕ:13.6.2017.

## ಕರ್ನಾಟಕ ಲೋಕಾಯುಕ್ತ ಕಾಯ್ದೆ 1984ರ ಕಲಂ 12(1)ರ ಅನ್ವಯ ವರದಿ

ವಿಷಯ: ಶ್ರೀ ಬಿ. ಈರಪ್ಪ ತಂದೆ ಲೇಟ್ ಮಜ್ಜಿಗೆ ತಿಮ್ಮಪ್ಪ, ವಾಸ: ಮೋಕಾ ಗ್ರಾಮ, ಬಳ್ಳಾರಿ ತಾಲ್ಲೂಕು ಮತ್ತು ಜಿಲ್ಲೆ ಇವರು ಸಲ್ಲಿಸಿದ ದೂರಿನ ಕುರಿತು.

****

ಈ ದೂರನ್ನು ಶ್ರೀ ಬಿ. ಈರಪ್ಪ ತಂದೆ ಲೇಟ್ ಮಜ್ಜಿಗೆ ತಿಮ್ಮಪ್ಪ, ವಾಸ: ಮೋಕಾ ಗ್ರಾಮ, ಬಳ್ಳಾರಿ ತಾಲ್ಲೂಕು ಮತ್ತು ಜಿಲ್ಲೆ (ಇನ್ನು ಮುಂದೆ ದೂರುದಾರರು ಎಂದು ಕರೆಯಲ್ಪಡುತ್ತಾರೆ) ಇವರು ಶ್ರೀ ಟಿ. ಪರುಶುರಾಮ, ಪಂಚಾಯತ್ ಅಭಿವೃದ್ಧಿ ಅಧಿಕಾರಿ, ಮೋಕಾ ಗ್ರಾಮ ಪಂಚಾಯತ್, ಬಳ್ಳಾರಿ ತಾಲ್ಲೂಕು ಮತ್ತು ಜಿಲ್ಲೆ (ಇನ್ನು ಮುಂದೆ ಎದುರುದಾರರು ಎಂದು ಕರೆಯಲ್ಪಡುತ್ತಾರೆ) ಇವರ ವಿರುದ್ಧ ಸಲ್ಲಿಸಿದ ದೂರನ್ನು ಕರ್ನಾಟಕ ಲೋಕಾಯುಕ್ತ ಕಾಯ್ದೆಯ ಕಲಂ.9ರಡಿಯಲ್ಲಿ ತನಿಖೆಗಾಗಿ ಕೈಗೆತ್ತಿಕೊಳ್ಳಲಾಯಿತು.

2. **ದೂರಿನ ಸಂಕ್ಷಿಪ್ತ ವಿವರ:**

ದೂರುದಾರರ ಸಹೋದರ ಬಿ.ಸಣ್ಣವಂಡ್ರಪ್ಪ ಇವರು ಪಂಚಾಯಿತಿಯಿಂದ ಯಾವುದೇ ಪರವಾನಿಗೆಯನ್ನು ತೆಗೆದುಕೊಳ್ಳದೇ ಸುಮಾರು 15 ಅಡಿಯಷ್ಟು ಎತ್ತರದ ಕಂಪೌಂಡ್ ವಾಲ್ ಅನ್ನು ನಿರ್ಮಿಸಿದ್ದಾರೆ, ಇದು ಸುಮಾರು 25 ಅಡಿ ಉದ್ದ ಇದ್ದು ಯಾವುದೇ ಬುನಾದಿ ಇಲ್ಲದೇ ಟೊಳ್ಳು ಇಟ್ಟಿಗೆಯಿಂದ ಕಟ್ಟಿರುವುದರಿಂದ ಯಾವುದೇ ಸಮಯದಲ್ಲಿ ಬಿದ್ದು ಹೋಗಬಹುದು ಹಾಗೂ ತಾನು ಪಕ್ಕದ ಮನೆಯಲ್ಲಿ ವಾಸವಾಗಿದ್ದು, ದನ-ಕರಗಳಿಗೆ ತೊಂದರೆಯಾಗಬಹುದು. ಪರವಾನಿಗೆ ಇಲ್ಲದೇ ಕಟ್ಟಿರುವ ಕಂಪೌಂಡ್ ಅನ್ನು ತೆರವುಗೊಳಿಸಲು ದಿ: 9-4-2016 ರಂದು ದೂರನ್ನು ಕೊಟ್ಟಿದ್ದೇನೆ. ವಕೀಲರ ಮುಖಾಂತರ ನೋಟಿಸ್ ಕೊಟ್ಟಿದ್ದೇನೆ. ಆದರೂ ಸಹ ಎದರುದಾರರು ಯಾವುದೇ ಕ್ರಮವನ್ನು ತೆಗೆದುಕೊಂಡಿಲ್ಲ ಎಂದು ದೂರಿನಲ್ಲಿ ಆಪಾದಿಸಿರುತ್ತಾರೆ.

Sd/-

3. ಈ ದೂರಿನ ಮೇಲೆ ಎದುರುದಾರರಿಂದ ಆಕ್ಷೇಪಣೆಗಳನ್ನು ಕೇಳಲಾಗಿದೆ. ಎದುರುದಾರರು ತಮ್ಮ ಆಕ್ಷೇಪಣೆಯಲ್ಲಿ ದೂರುದಾರರ ಶ್ರೀ ಈರಪ್ಪ ಮತ್ತು ಆತನ ತಮ್ಮಂದಿರು 2004 ರಲ್ಲಿ ಈಗಾಗಲೇ ಮನೆ ಕಟ್ಟಿಸಿಕೊಂಡಿದ್ದಾರೆ. ಅರ್ಜಿದಾರರ ತಮ್ಮ ವಂದ್ರಪ್ಪ ಮನೆಯ ಮುಂದೆ ಆಹಾರ ದಾನ್ಯ ಸಂಗ್ರಹಣ ನಿರ್ಮಿಸಿಕೊಂಡಿದ್ದಾರೆ, ಯಾವುದೇ ಕಂಪೌಂಡ್ ವಾಲ್ ನಿರ್ಮಿಸಿಲ್ಲ. ಶೆಡ್ ನಿರ್ಮಾಣದ ಸಮಯದಲ್ಲಿ ಪಂಚಾಯತಿಯ ಪರವಾನಿಗೆಯನ್ನು ಪಡೆದಿಲ್ಲ. ಪಂಚಾಯತಿ ವತಿಯಿಂದ ನೋಟಿಸ್ ನೀಡಿ ತೆರವುಗೊಳಿಸಲು ಸೂಚಿಸಲಾಗಿದೆ. ಇದರಲ್ಲಿ ನನ್ನ ಯಾವುದೇ ಹಸ್ತಕ್ಷೇಪ ಇರುವುದಿಲ್ಲ ಎಂದು ತಿಳಿಸಿರುತ್ತಾರೆ.

4. ಎದರುದಾರರ ಆಕ್ಷೇಪಣೆಗಳ ಮೇಲೆ ದೂರುದಾರರಿಂದ ಪ್ರತ್ಯುತ್ತರವನ್ನು ಕೇಳಲಾಗಿ, ಅದರಲ್ಲಿ ಪಂಚಾಯತ್ ಅಭಿವೃದ್ಧಿ ಅಧಿಕಾರಿಯವರು ಉದ್ದೇಶಪೂರ್ವಕವಾಗಿ ವಾಸ್ತವ ಅಂಶಗಳನ್ನು ಮುಚ್ಚಿಟ್ಟಿದ್ದಾರೆ. ಎದರುದರರಿಗೆ ಕಾನೂನಿನ ಬಗ್ಗೆ ಗೌರವ ಇಲ್ಲ. ಕರ್ತವ್ಯ ಪ್ರಜ್ಞೆ ಹೊಣೆಗಾರಿಕೆ ಮತ್ತು ಜವಾಬ್ದಾರಿ ಇಲ್ಲ. ಎದರುದಾರರು ನೋಟಿಸ್ ಕೊಟ್ಟಿದ್ದರೂ ಸಹ ಯಾವುದೇ ಕ್ರಮ ತೆಗೆದುಕೊಂಡಿಲ್ಲ. ಆದ್ದರಿಂದ ಎದರುದಾರರ ವಿರುದ್ಧ ಕ್ರಮ ತೆಗೆದುಕೊಳ್ಳಲು ಕೋರಿಕೊಂಡಿದ್ದಾರೆ.

5. ಈ ಪ್ರಕರಣದ ಸಂಪೂರ್ಣ ಕಡತವನ್ನು ಪರಿಶೀಲಿಸಿದ್ದೇನೆ. ಎದುರುದಾರರು ದೂರುದಾರರಿಗೆ ಕೊಟ್ಟಿರುವ ನೋಟಿಸ್ ಪ್ರತಿಯಲ್ಲಿ ದಿನಾಂಕ: 18-7-2016 ರಂದು ಸ್ಥಳ ಪರಿಶೀಲನೆಗೆ ಬಂದಾಗ ಪರವಾನಿಗೆ ಪಡೆಯದೇ ಶಡ್ ಮತ್ತು ಕಂಪೌಂಡ್ ನಿರ್ಮಿಸಿರುವ ಬಗ್ಗೆ ದೃಢಪಟ್ಟಿದೆ, ಪರಿಶೀಲನೆಯ ಸಮಯದಲ್ಲಿ ಒಬ್ಬರಿಗೊಬ್ಬರು ವಾದವನ್ನು ಮಾಡಿಕೊಂಡಿದ್ದರಿಂದ ಮಾಹಿತಿಯನ್ನು ಪಡೆಯದೇ ವಾಪಸ್ಸು ಬಂದಿರುತ್ತೇನೆ. ಕಂಪೌಂಡ ಗೋಡೆ ಮತ್ತು ಶೆಡ್‌ಗಳನ್ನು ತೆರವುಗೊಳಿಸತಕ್ಕದ್ದು ಅಂತ ಯಾರಿಗೆ ನೋಟಿಸ್ ಕೊಟ್ಟಿದ್ದಾರೆ ಎನ್ನುವುದೇ ತಿಳಿಯುತ್ತಿಲ್ಲ. ಇದರ ಪ್ರತಿಯನ್ನು ಮಾತ್ರ ದೂರುದಾರರಿಗೆ ಕೊಟ್ಟಿದ್ದಾರೆ. ಸಣ್ಣವಂದ್ರಪ್ಪ ಇವರು ಹೆಬ್ಬೆರಳು ಗುರುತು ಹಾಕಿ ನೋಟಿಸ್ ತೆಗೆದುಕೊಂಡಿರುವುದು ಕಂಡುಬರುತ್ತದೆ. ದಿನಾಂಕ: 25-10-2016 ರಂದು ನೋಟಿಸ್ ಕೊಟ್ಟ ನಂತರ ಎದರುದಾರರು ಯಾವುದೇ ಕ್ರಮ ತೆಗೆದುಕೊಳ್ಳದೇ ಕರ್ತವ್ಯಲೋಪ ಎಸೆಗಿದ್ದಾರೆ.

6. ಒಂದು ಶೆಡ್ ಮತ್ತು ಕಂಪೌಂಡ್ ಗೋಡೆಯನ್ನು ಗ್ರಾಮ ಪಂಚಾಯತ್ ಪರವಾನಿಗೆ ಇಲ್ಲದೇ ನಿರ್ಮಿಸಿಕೊಂಡಿರುವುದು ಸ್ಥಳ ಪರಿಶೀಲನೆಯಿಂದ ದೃಢಪಟ್ಟ ನಂತರವು ಸಹ ಅದನ್ನು ತೆರವುಗೊಳಿಸಲು ಯಾವುದೇ ಕ್ರಮ ಕೈಗೊಳ್ಳದೇ ಎದರುದಾರರು ಕರ್ತವ್ಯಲೋಪ ಎಸೆಗಿದ್ದಾರೆ. ಕೇವಲ ನೋಟಿಸ್ ಕೊಡುವುದರಿಂದ ಸಮಸ್ಯೆ ಪರಿಹಾರವಾಗುವುದಿಲ್ಲ. ಪಂಚಾಯತ್ ರಾಜ್

ಅಧಿನಿಯಮದಲ್ಲಿ ತಮಗೆ ಇರುವ ಅಧಿಕಾರವನ್ನು ಎದರುದಾರರು ಚಲಾಯಿಸದೇ ಹೋದಲ್ಲಿ ಅದು ಸಹ ಕರ್ತವ್ಯಲೋಪವಾಗುತ್ತದೆ. ಆಕ್ಷೇಪಣೆಗಳಲ್ಲಿ ಎದರುದಾರರು ಸದರಿ ಸಣ್ಣವಂಡ್ರಪ್ಪ ಎನ್ನುವವರು ಆಹಾರ ದಾನ್ಯ ಸಂಗ್ರಹಣೆಗೆ ಶೆಡ್ ನಿರ್ಮಿಸಿದ್ದಾರೆ ಅಂತ ಹೇಳಿದ್ದು, ಸಣ್ಣವಂಡ್ರಪ್ಪ ಇವರಿಗೆ ಕೊಟ್ಟ ನೋಟಿಸ್‌ನಲ್ಲಿ ಶೆಡ್ ಮತ್ತು ಕಂಪೌಂಡ್ ಗೋಡೆಯನ್ನು ಅಕ್ರಮವಾಗಿ ನಿರ್ಮಿಸಿರುವುದು ಕಂಡುಬಂದಿದೆ ಅಂತ ಹೇಳಿದ್ದಾರೆ. ಆದ್ದರಿಂದ, ಪರವಾನಿಗೆ ಇಲ್ಲದೇ ಅಕ್ರಮವಾಗಿ ನಿರ್ಮಿಸಿರುವ ಶೆಡ್ ಮತ್ತು ಕಂಪೌಂಡ ಗೋಡೆಯನ್ನು ತೆರವುಗೊಳಿಸಲು ಕಾನೂನಿನ ಪ್ರಕಾರ ಕ್ರಮ ಕೈಗೊಳ್ಳುವಂತೆ ನಿರ್ದೇಶಿಸಲು ಕರ್ನಾಟಕ ಲೋಕಾಯುಕ್ತ ಕಾಯ್ದೆಯ ಕಲಂ 12(1)ರಡಿಯಲ್ಲಿ ಪ್ರದತ್ತವಾದ ಅಧಿಕಾರದಡಿಯಲ್ಲಿ, ಎದುರುದಾರರಿಗೆ ನಿರ್ದೇಶನ ನೀಡಲು ಶಿಸ್ತು ಪ್ರಾಧಿಕಾರಕ್ಕೆ ಶಿಫಾರಸ್ಸು ಮಾಡಲಾಗಿದೆ.

7. ಮುಂದುವರೆದು, ಕರ್ನಾಟಕ ಲೋಕಾಯುಕ್ತ ಕಾಯ್ದೆಯ ಕಲಂ 12(2)ರ ಪ್ರಕಾರ, ಶಿಸ್ತು ಪ್ರಾಧಿಕಾರವು ಕರ್ನಾಟಕ ಲೋಕಾಯುಕ್ತ ಕಾಯ್ದೆ ಕಲಂ 12(1)ರ ವರದಿಯಲ್ಲಿನ ಶಿಫಾರಸ್ಸಿಗನುಗುಣವಾಗಿ ಕ್ರಮ ಕೈಗೊಂಡ ಬಗ್ಗೆ ಅಥವಾ ಕೈಗೊಳ್ಳಬಹುದಾದ ಕ್ರಮದ ಬಗ್ಗೆ ಈ ವರದಿ ತಲುಪಿದ ದಿನಾಂಕದಿಂದ ಒಂದು ತಿಂಗಳ ಅವಧಿಯೊಳಗೆ ಈ ಪ್ರಾಧಿಕಾರಕ್ಕೆ ತಿಳಿಸುವುದು.

ಸಂಬಂಧಪಟ್ಟ ದಾಖಲೆಗಳನ್ನು ಲಗತ್ತಿಸಿದೆ.

13/6/17

(ನ್ಯಾಯಮೂರ್ತಿ ಸುಭಾಷ್ ಬಿ. ಅಡಿ)
ಉಪಲೋಕಾಯುಕ್ತರು,
ಕರ್ನಾಟಕ ರಾಜ್ಯ, ಬೆಂಗಳೂರು.